## ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 719
ಸದಸ್ಯರ ಹೆಸರು : ಶ್ರೀ ಐವನ್ ಡಿ ಸೋಜಾ (ವಿಧಾನಸಭಾ ಕ್ಷೇತ್ರ)
ಉತ್ತರಿಸಬೇಕಾಗಿದ ದಿನಾಂಕ : 10-03-2026
ಉತ್ತರಿಸುವ ಸಚಿವರು : ಮಾನ್ಯ ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು.

| ಕ್ರ. ಸಂ. | ಪ್ರಶ್ನೆಗಳು | ಉತ್ತರ |
|---|---|---|
| ಅ) | ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಒಳಚಂಡಿ ವ್ಯವಸ್ಥೆ ತೀವ್ರ ಹದಗೆಟ್ಟಿದ್ದು ಈ ವ್ಯವಸ್ಥೆ ಸರಿಪಡಿಸಲು ರೂ.1250 ಕೋಟಿ ಅನುದಾನ ಬೇಡಿಕೆ ಇರುವುದರಿಂದ ಈ ಸಮಸ್ಯೆಯನ್ನು ಸರ್ಕಾರ ಯಾವ ರೀತಿ ಪರಿಹರಿಸುವುದು: (ವಿವರ ನೀಡುವುದು) | ಕರ್ನಾಟಕ ನಗರ ಮೂಲಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ನಿಗಮ ನಿಯಮಿತ (KUIDFC) ದ ವತಿಯಿಂದ ರಾಷ್ಟ್ರೀಯ ಹಸಿರು ನ್ಯಾಯಾಧೀಕರಣ ಪರಿಹಾರ ನಿಧಿ (ಎನ್.ಜಿ.ಟಿ) ಹಾಗೂ ಸ್ವಚ್ಛ ಭಾರತ್ ಮಿಷನ್ (ನ -2.0 (ಎಸ್.ಬಿ.ಎಂ-2) ರಡಿ ಜಲಶುದ್ಧಿ ಅಭಿಯಾನ ಕಾರ್ಯಕ್ರಮವನ್ನು (ಬಳಸಿದ ನೀರು ನಿರ್ವಹಣೆ) ಅನುಷ್ಠಾನಗೊಳಿಸಲಾಗುತ್ತಿದೆ.<br><br>ರಾಷ್ಟ್ರೀಯ ಹಸಿರು ನ್ಯಾಯಾಧೀಕರಣ ಪರಿಸರ ಪರಿಹಾರ ನಿಧಿಯಡಿ (ಎನ್.ಜಿ.ಟಿ) ಸರ್ಕಾರದ ಆದೇಶ ಸಂಖ್ಯೆ: ನಅಇ 5 ಸಿಎಸ್ಎಸ್ 2023 (ಭಾ-3) ದಿನಾಂಕ:30.11.2023 ರಂತೆ ಮಂಗಳೂರು ನಗರದಲ್ಲಿ ಒಳಚರಂಡಿ ವ್ಯವಸ್ಥೆ ಕಲ್ಪಿಸಲು ರೂ.40.00 ಕೋಟಿಗಳ ಅನುದಾನ ಮಂಜೂರಾಗಿರುತ್ತದೆ.<br><br>**ಏಷ್ಯನ್ ಅಭಿವೃದ್ಧಿ ಬ್ಯಾಂಕ್ ನೆರವಿನ - ಕರ್ನಾಟಕ ಸಮಗ್ರ ನಗರ ನೀರು ನಿರ್ವಹಣೆ ಹೂಡಿಕೆ ಕಾರ್ಯಕ್ರಮ (ಕ್ವಿಮಿಪ್)ದಡಿ** ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಒಳಚಂಡಿ ವ್ಯವಸ್ಥೆಯನ್ನು ಅಭಿವೃಧಿ ಪಡಿಸಲು ಅವಶ್ಯಕತೆಗನುಗುಣವಾಗಿ ಹಾಗೂ ಲಭ್ಯವಿದ್ದ ಅನುದಾನದಲ್ಲಿ ಕರ್ನಾಟಕ ಸಮಗ್ರ ನಗರ ನೀರು ನಿರ್ಹಣೆ ಹೂಡಿಕೆ ಕಾರ್ಯಕ್ರಮ(ಕ್ವಿಮಿಪ್) ದಡಿ ಏಷ್ಯನ್ ಅಭಿವೃದ್ಧಿ ಬ್ಯಾಂಕ್, ಕೇಂದ್ರ ಪುರಸ್ಕೃತ ಅಮೃತ್ -1.0, ರಾಜ್ಯ ಸರ್ಕಾರ ಹಾಗೂ ಸ್ಥಳೀಯ ಸಂಸ್ಥೆಗಳ ಸಹಯೋಗದೊಂದಿಗೆ ಕೆ.ಯು.ಐ.ಡಿ.ಎಫ್.ಸಿ ವತಿಯಿಂದ ಕ್ವಿಮಿಪ್ ಯೋಜನೆಯಡಿ ರೂ. 316.49 ಕೋಟಿ |

| ಕ್ರ. ಸಂ. | ಪ್ರಶ್ನೆಗಳು | ಉತ್ತರ |
|---|---|---|
| | | ಮೊತ್ತದಲ್ಲಿ 8 ಒಳಚರಂಡಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗುತ್ತಿದ್ದು, ಇದರಲ್ಲಿ 7 ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದ್ದು, ಬಾಕಿ 1 ಕಾಮಗಾರಿಯನ್ನು ಜೂನ್-2026ಗೆ ಪೂರ್ಣಗೊಳಿಸಲಾಗುವುದು. ಇಲ್ಲಿಯವರಗೆ ರೂ.300.06 ಕೋಟಿಗಳನ್ನು ವೆಚ್ಚ ಮಾಡಲಾಗಿದೆ. ಕಾಮಗಾರಿಯ ವಿವರಗಳನ್ನು **ಅನುಬಂಧ -1** ರಲ್ಲಿ ನೀಡಲಾಗಿದೆ. |
| ಆ) | ಮಂಗಳೂರು ನಗರದಲ್ಲಿ ಸುಮಾರು 50 ವರ್ಷಕ್ಕಿಂತ ಹಳೆಯದಾದ ಒಳಚರಂಡಿ ಇದ್ದು, ಇದು ಸಂಪೂರ್ಣ ಹದಗೆಟ್ಟಿ ಒಳಚರಂಡಿ ನೀರು ಸಾರ್ವಜನಿಕರ ತೊಡುಗಳಲ್ಲಿ ಹರಿಯುತ್ತಿದ್ದು, ಮಂಗಳೂರು ನಗರದ ಕೆರೆ, ಬಾವಿ ಮತ್ತು ನದಿಗಳ ನೀರು ಸಂಪೂರ್ಣ ಹಾಳಾಗಿದ್ದು, ಈ ಬಗ್ಗೆ ಸಮಗ್ರ ವರದಿ ಪಡೆದು ಸರ್ಕಾರ ಕ್ರಮ ಕೈಗೊಳ್ಳುವುದೇ; | **ಬಳಸಿದ ನೀರು ನಿರ್ವಹಣೆ ಯೋಜನೆ** ಅನುದಾನಕ್ಕೆ ಅನುಗುಣವಾಗಿ ವಿಸ್ತೃತ ಯೋಜನಾ ವರದಿಯನ್ನು (ಡಿ.ಪಿ.ಆರ್) ತಯಾರಿಸಿದ್ದು, ವಿಸ್ತೃತ ಯೋಜನಾ ವರದಿಯಲ್ಲಿ ಹಾನಿಗೊಳಗಾಗಿರುವ 8.17 ಕಿ.ಮೀ ಉದ್ದದ ಪೈಪ್ ಲೈನ್ ದುರಸ್ಥಿ ಕಾಮಗಾರಿ, ಎನ್.ಜಿ.ಟಿ ಮಾನದಂಡಗಳನ್ನು ಅನುಸರಿಸಲು ಪಚನಾಡಿಯಲ್ಲಿ ಪ್ರಸ್ತುತ ಇರುವ 8.75 ಎಂ.ಎಲ್.ಡಿ ASP Technology ತ್ಯಾಜ್ಯ ನೀರು ಸಂಸ್ಕರಣಾ ಘಟಕವನ್ನು SBR Technology ಗೆ ಉನ್ನತೀಕರಿಸುವ ಕಾಮಗಾರಿ ಮತ್ತು ಬಜಾಲ್ ನಲ್ಲಿ ಪ್ರಸ್ತುತ ಇರುವ 20 ಎಂ.ಎಲ್.ಡಿ ASP Technology ತ್ಯಾಜ್ಯ ನೀರು ಸಂಸ್ಕರಣಾ ಘಟಕವನ್ನು ಉನ್ನತೀಕರಿಸುವ ಕಾಮಗಾರಿ ಹಾಗೂ ಅತ್ತಾವರ ನಗರದ ಮನೆಗಳಿಂದ ಹೊರ ಬರುವ ತ್ಯಾಜ್ಯ ನೀರು ತೆರದ ಮಳೆ ನೀರಿನ ಗುಂಡಿಗೆ ಹರಿದು ನದಿ ನೀರನ್ನು ಸೇರಿ ನದಿ ನೀರು ಮಲಿನವಾಗುತ್ತಿರುವುದರಿಂದ ಸದರಿ ತ್ಯಾಜ್ಯ ನೀರನ್ನು, ಅತ್ತಾವರದಲ್ಲಿ ಹೊಸ ವೆಟ್ ವೆಲ್ ನಿರ್ಮಾಣ ಮಾಡಿ ಸದರಿ ವೆಟ್ ವೆಲ್‌ಗೆ ಸಾಗಿಸಿ ನಂತರ ಕಾವೂರ್ ತ್ಯಾಜ್ಯ ನೀರು ಸಂಸ್ಕರಣಾ ಘಟಕಕ್ಕೆ ಸಾಗಿಸುವಂತ ಕಾಮಗಾರಿಗಳನ್ನು ಅಳವಡಿಸಿಕೊಳ್ಳಲಾಗಿದೆ. ಸದರಿ ವಿಸ್ತೃತ ಯೋಜನಾ ವರದಿಗೆ ಆಡಳಿತಾತ್ಮಕ ಅನುಮೋದನೆ ಪಡೆದು ಟೆಂಡರ್ ಆಹ್ವಾನಿಸಿ, ಗುತ್ತಿಗೆದಾರರಾದ M/s NBM Infratech Pvt. Ltd ರವರಿಗೆ ಕಾರ್ಯಾದೇಶ ಪತ್ರವನ್ನು ನೀಡಲಾಗಿದ್ದು, ಕಾಮಗಾರಿಯು ಪ್ರಗತಿಯಲ್ಲಿರುತ್ತದೆ. |

| ಕ್ರ. ಸಂ. | ಪ್ರಶ್ನೆಗಳು | ಉತ್ತರ |
|---|---|---|
| | | **<u>ಏಷ್ಯನ್ ಅಭಿವೃದ್ಧಿ ಬ್ಯಾಂಕ್ ನೆರವಿನ - ಕರ್ನಾಟಕ ಸಮಗ್ರ ನಗರ ನೀರು ನಿರ್ವಹಣೆ ಹೂಡಿಕೆ ಕಾರ್ಯಕ್ರಮ(ಕ್ವಿಮಿಪ್)</u>**<br><br>ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಒಳಚಂಡಿ ವ್ಯವಸ್ಥೆಯನ್ನು ಅಭಿವೃಧಿ ಪಡಿಸಲು ಅವಶ್ಯಕತೆಗನುಗುಣವಾಗಿ ಹಾಗೂ ಲಭ್ಯವಿದ್ದ ಅನುದಾನದಲ್ಲಿ ಕರ್ನಾಟಕ ಸಮಗ್ರ ನಗರ ನೀರು ನಿರ್ಹಣೆ ಹೂಡಿಕೆ ಕಾರ್ಯಕ್ರಮ(ಕ್ವಿಮಿಪ್) ದಡಿ ಏಷ್ಯನ್ ಅಭಿವೃದ್ಧಿ ಬ್ಯಾಂಕ್, ಕೇಂದ್ರ ಪುರಸ್ಕೃತ ಅಮೃತ್ -1.0, ರಾಜ್ಯ ಸರ್ಕಾರ ಹಾಗೂ ಸ್ಥಳೀಯ ಸಂಸ್ಥೆಗಳ ಸಹಯೋಗದೊಂದಿಗೆ ಕೆ.ಯು.ಐ.ಡಿ.ಎಫ್.ಸಿ ವತಿಯಿಂದ ಕ್ವಿಮಿಪ್ ಯೋಜನೆಯಡಿ ರೂ.316.49 ಕೋಟಿ ಮೊತ್ತದಲ್ಲಿ 8 ಒಳಚರಂಡಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಇದರಲ್ಲಿ 7 ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದ್ದು, ಬಾಕಿ 1 ಕಾಮಗಾರಿಯನ್ನು ಜೂನ್-2026ಗೆ ಪೂರ್ಣಗೊಳಿಸಲಾಗುವುದು. ಇಲ್ಲಿಯವರಗೆ ರೂ 300.06 ಕೋಟಿಗಳನ್ನು ವೆಚ್ಚ ಮಾಡಲಾಗಿದೆ. |
| ಇ) | ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಒಳಚರಂಡಿ ನೀರು ಶುದ್ಧೀಕರಿಸಿ ಕಾರ್ಖಾನೆಗಳ ಜೊತೆ ಒಪ್ಪಂದ ಮಾಡಿಕೊಂಡು ಒಳಚಂಡಿ ನೀರನ್ನು ಶುದ್ದೀಕರಿಸಲು ಕೈಗಾರಿಕೆಗಳಿಗೆ ನೀಡಲು ಸರ್ಕಾರ ಕ್ರಮ ಕೈಗೊಳ್ಳುವುದೇ ಈಗಾಗಲೇ ಒಂದು ಕೈಗಾರಿಕೆಗೆ ಈ ಮಾದರಿಯ ವ್ಯವಸ್ಥೆಯನ್ನು ಕಲ್ಪಿಸಲಾಗಿದ್ದು, ಉಳಿದ ಕಡೆಗಳ ಒಳಚರಂಡಿ ನೀರನ್ನು ಶುದ್ದೀಕರಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ: (ವಿವರ ನೀಡುವುದು) | **ಮಂಗಳೂರು ಮಹಾನಗರ ಪಾಲಿಕೆ** ವ್ಯಾಪ್ತಿಯಲ್ಲಿ ನಿರ್ಮಿಸಲಾದ 4 ಜಲ ತ್ಯಾಜ್ಯ ಸಂಸ್ಕರಣ ಘಟಕಗಳ ಪೈಕಿ ಕಾವೂರು STP ಯ ಸಾಮರ್ಥ್ಯವು 43.5 MLD ಗಳಾಗಿದ್ದು ಸದರಿ STP ಯಲ್ಲಿ 25 MLD TTP ಯನ್ನು ಅಳವಡಿಸಿದ್ದು ಸಂಸ್ಕರಿಸಿದ ಬಳಸಿದ ನೀರನ್ನು ಸಂಪೂರ್ಣವಾಗಿ ಕಾರ್ಖಾನೆಗಳಿಗೆ ಸರಬರಾಜು ಮಾಡಲಾಗುತ್ತಿರುತ್ತದೆ. ಸದರಿ STP ಹಾಗೂ ಸಂಬಂಧಿಸಿದ ವೆಲ್ ವೆಲ್ ಗಳನ್ನು ಮಹಾನಗರಪಾಲಿಕೆ ಹಾಗೂ MSEZ (30%; 70% ಅನುಪಾತದಲ್ಲಿ) ನಿರ್ವಹಣೆ ಮಾಡಲಾಗುತ್ತಿರುತ್ತದೆ.<br><br>ಉಳಿದಂತೆ ಸುರತ್ಕಲ್ ಮತ್ತು ಬಜಾಲ್ STP ಯಲ್ಲಿ ಸಂಸ್ಕರಿಸಿದ ನೀರನ್ನು ಕಾರ್ಖಾನೆಗಳಿಗೆ ಮರು ಬಳಕೆ ಮಾಡಲು MSEZ ಸಂಸ್ಥೆಯ |

| ಕ್ರ. ಸಂ. | ಪ್ರಶ್ನೆಗಳು | ಉತ್ತರ |
|---|---|---|
| | | ಜೊತೆ ಮಹಾನಗರ ಪಾಲಿಕೆಯು MOA ಮಾಡಿಕೊಳ್ಳಲಾಗಿರುತ್ತದೆ. ಆದರೆ ನಿರೀಕ್ಷಿತ ಪ್ರಮಾಣದಲ್ಲಿ ಕಾರ್ಖಾನೆಗಳು ಬಾರದೆ ಇರುವುದರಿಂದ ಹಾಗೂ MSEZ 'ಸಂಸ್ಥೆಯಲ್ಲಿ ಅನುದಾನದ ಕೊರತೆ ಇರುವುದರಿಂದ MSEZ ಸಂಸ್ಥೆಯು ಸದ್ರಿ STP ಗಳ ನಿರ್ವಹಣೆ ಹಾಗೂ ಕಾರ್ಯಾಚರಣೆ ಮಾಡಲು STP ಗಳ ಹಸ್ತಾಂತರ ಪಡೆಯಲು ವಿಳಂಭವಾಗಿರುತ್ತದೆ. |
| ಈ) | ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಶುದ್ಧ ಕುಡಿಯುವ ನೀರು ಘಟಕ ರಚಿಸಲು ಸರ್ಕಾರ ಹಾಗೂ 24/7 ಶುದ್ಧ ನೀರು ಒದಗಿಸಲು ಸರ್ಕಾರದ ಮುಂದಿರುವ ಸವಾಲುಗಳು ಏನು? (ವಿವರ ನೀಡುವುದು) | **<u>ಕೆಯುಐಡಿಎಫ್‌ಸಿ ವತಿಯಿಂದ</u>**:ಏಷ್ಯನ್ ಅಭಿವೃದ್ಧಿ ಬ್ಯಾಂಕ್ ನೆರವಿನ - ಕರ್ನಾಟಕ ಸಮಗ್ರ ನಗರ ನೀರು ನಿರ್ವಹಣೆ ಹೂಡಿಕೆ ಕಾರ್ಯಕ್ರಮ(ಕ್ವಿಮಿಪ್)<br><br>**1. ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಶುದ್ಧ ಕುಡಿಯುವ ನೀರು ಘಟಕ ನಿರ್ಮಾಣ.**<br><br>ಕರ್ನಾಟಕ ಸಮಗ್ರ ನಗರ ನೀರು ನಿರ್ವಹಣೆ ಹೂಡಿಕೆ ಕಾರ್ಯಕ್ರಮ(ಕ್ವಿಮಿಪ್) ದಡಿ ಏಷ್ಯನ್ ಅಭಿವೃದ್ಧಿ ಬ್ಯಾಂಕ್, ಕೇಂದ್ರ ಪುರಸ್ಕೃತ ಅಮೃತ್ - 1.0, ರಾಜ್ಯ ಸರ್ಕಾರ ಹಾಗೂ ಸ್ಥಳೀಯ ಸಂಸ್ಥೆಗಳ ಸಹಯೋಗದೊಂದಿಗೆ ಕೆ.ಯು.ಐ.ಡಿ.ಎಫ್.ಸಿ ವತಿಯಿಂದ ಈ ಕೆಳಕಂಡ ಶುದ್ಧ ಕುಡಿಯುವ ನೀರು ಘಟಕಗಳ ನಿರ್ಮಾಣಕ್ಕೆ ಕ್ರಮವಹಿಸಲಾಗಿದೆ.<br><br>**ಕೇಂದ್ರ ಪುರಸ್ಕೃತ ಅಮೃತ್** -1.0 ಅಡಿ ರಾಮಲಕಟ್ಟೆ ಬಳಿ 20 MLD WTP ನಿರ್ಮಾಣ 20 MLD ಶುದ್ಧ ಕುಡಿಯುವ ನೀರು ಶುದ್ಧೀಕರಣ ಘಟಕವು ಪೂರ್ಣಗೊಂಡಿದ್ದು, 10 MLD ಶುದ್ಧೀಕರಿಸಿದ ನೀರನ್ನು ಮಂಗಳೂರು ನಗರಕ್ಕೆ ಮತ್ತು 10 MLD ಶುದ್ಧೀಕರಿಸಿದ ನೀರನ್ನು ಮಾರ್ಗ ಮಧ್ಯದ ಗ್ರಾಮಗಳಿಗೆ ಒದಗಿಸಲಾಗುತ್ತಿದೆ.<br><br>**ರಾಜ್ಯ ಸರ್ಕಾರ ಹಾಗೂ ಸ್ಥಳೀಯ ಸಂಸ್ಥೆಗಳ ಸಹಯೋಗದೊಂದಿಗೆ** ಅಡ್ಯಾರ್ ಬಳಿ 125 MLD WTP ನಿರ್ಮಾಣ ಪ್ರಗತಿಯಲ್ಲಿರುವ 24/7 ನೀರು ಸರಬರಾಜು ಕಾಮಗಾರಿಯಲ್ಲಿ ಸರ್ಕಾರದ ಆದೇಶ |

<table>
<tr><th>ಕ್ರ. ಸಂ.</th><th>ಪ್ರಶ್ನೆಗಳು</th><th>ಉತ್ತರ</th></tr>
<tr><td></td><td></td><td>
ಸಂಖ್ಯೆ: ನಅಇ 159 ಪಿಆರ್ ಜೆ 2023 ಬೆಂಗಳೂರು ದಿನಾಂಕ: 02.01.2024 ರಂತೆ 127.70 ಕೋಟಿಗಳಲ್ಲಿ ಮಂಗಳೂರು ನಗರದ ಅಡ್ಯಾರ್ ಬಳಿ ಹೊಸ 125 ಎಂ.ಎಲ್.ಡಿ ನೀರು ಶುದ್ಧೀಕರಣ ಘಟಕವನ್ನು ನಿರ್ಮಿಸಲಾಗುತ್ತಿದ್ದು, ಶೇ 35% ಭೌತಿಕ ಪ್ರಗತಿಯಾಗಿದ್ದು, ಕಾಮಗಾರಿಯು ಪ್ರಗತಿಯಲ್ಲಿದೆ. ಡಿಸೆಂಬರ್-2026 ಕ್ಕೆ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ.
2. ಮಂಗಳೂರು ನಗರಕ್ಕೆ 24/7 ಶುದ್ಧ ನೀರು ಒದಗಿಸಲು ಕೈಗೊಂಡಿರುವ ಕ್ರಮ.
ಕರ್ನಾಟಕ ಸಮಗ್ರ ನಗರ ನೀರು ನಿರ್ವಹಣೆ ಹೂಡಿಕೆ ಕಾರ್ಯಕ್ರಮ(ಕ್ವಿಮಿಪ್) ದಡಿ ಏಷ್ಯನ್ ಅಭಿವೃದ್ಧಿ ಬ್ಯಾಂಕ್, ಕೇಂದ್ರ ಪುರಸ್ಕೃತ ಅಮೃತ್ - 1.0, ರಾಜ್ಯ ಸರ್ಕಾರ ಹಾಗೂ ಸ್ಥಳೀಯ ಸಂಸ್ಥೆಗಳ ಸಹಯೋಗದೊಂದಿಗೆ ಕೆ.ಯು.ಐ.ಡಿ.ಎಫ್.ಸಿ ವತಿಯಿಂದ ಮಂಗಳೂರು ನಗರದಲ್ಲಿ 24/7 ಕುಡಿಯುವ ನೀರು ಸರಬರಾಜು ಕಾಮಗಾರಿ ಡಿಸೆಂಬರ್ 2019 ರಿಂದ ಪ್ರಾರಂಭವಾಗಿದ್ದು, ಕಾಮಗಾರಿಯು ಪ್ರಗತಿಯಲ್ಲಿದೆ. ವಿವರ ಈ ಕೆಳಗಿನಂತಿದೆ.
<table>
<tr><th>ಪ್ರಮುಖ ಘಟಕಗಳು</th><th>ಪ್ರಗತಿ</th></tr>
<tr><td>ಪೈಪ್ ಲೈನ್-1205.81 ಕಿ.ಮೀ<br>ಜಲಸಂಗ್ರಹಗಾರ-24 ಸಂಖ್ಯೆ<br>ನಳ ಸಂಪರ್ಕ-96300 ಸಂಖ್ಯೆ</td><td>ಪೈಪ್ ಲೈನ್-898.65 ಕಿ.ಮೀ<br>ಜಲಸಂಗ್ರಹಗಾರ-94%<br>ನಳ ಸಂಪರ್ಕ-36339 ಸಂಖ್ಯೆ</td></tr>
</table>
ಡಿಸೆಂಬರ್-2026 ಕ್ಕೆ ಪೂರ್ಣಗೊಳಿಸಲು ಉದ್ದೇಶಿಸಲಾಗಿದ್ದು, ಪೂರ್ಣಗೊಂಡನಂತರ ಈ ಕೆಳಗಿನ ಮಾನದಂಡಗಳೊಂದಿಗೆ 24/7 ಕುಡಿಯುವ ನೀರು ಸರಬರಾಜು ಮಾಡಲಾಗುವುದು.
</td></tr>
</table>

| ಕ್ರ. ಸಂ. | ಪ್ರಶ್ನೆಗಳು | ಉತ್ತರ |
|---|---|---|
| | | a) Achieving continuous water supply with a minimum of 7 mts residual pressure to minimum 98% of authorized connections.<br>b) achieving targets relating to losses (NRW) of less than 25%<br>c) 98% of properties with authorized connections must be metered and computerised.<br>d) responding to 100% customer service complaints within 24 hours. |

ಕಡತ ಸಂಖ್ಯೆ:ನಅಇ 48 ಪಿಆರ್‌ಜೆ 2026

**(ಬಿ. ಎಸ್. ಸುರೇಶ)**

ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು